ಶ್ರೀ ಎಂ. ಮಲ್ಲಪ್ಪ.—ಈಗಾಗಲೇ ೨೦ ಹಾಸಿಗೆ ಇರತಕ್ಕ ಸುಮಾರು ೮ ಲಕ್ಷ ರೂಪಾಯಿಯ ಅಂದಾಜು ಮಾಡಿದ್ದಾರೆ. ಅದರ ಜೊತೆಗೆ ೪.೪೫ ಲಕ್ಷ ರೂಪಾಯಿಯ ಇನ್ನೊಂದು ಅಂದಾಜು ಮಾಡಿದ್ದಾರೆ. ಸ್ಪೆಷಲ್ ವಾರ್ಡ್‌ಗೆ ಸಂಬಂಧಪಟ್ಟಂತೆ ೪,೨೫ ಲಕ್ಷ ರೂಪಾಯಿಯ ಅಂದಾಜು ಮಾಡಿದ್ದಾರೆ. ಆಪರೇಷನ್ ಥಿಯೇಟರ್ ಮತ್ತೆ ಇತರೆ ಕೆಲಸಗಳನ್ನು ಕಾರ್ಯಗತ ಮಾಡಲಿಕ್ಕೆ ಹಣಕಾಸಿನ ತೊಂದರೆ ಇದೆ, ಹಣಕಾಸಿನ ಅನುಕೂಲತೆಯನ್ನು ನೋಡಿಕೊಂಡು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಮತ್ತೆ ಎಕ್ಸರೇ ಯಂತ್ರ ಕೆಟ್ಟುಹೋಗಿದ್ದುದು ನಿಜ. ೧೭-೧೦-೧೯೭೮ ರಲ್ಲಿ ಮೊದಲಬಾರಿಗೆ ರಿಪೇರಿ ಮಾಡಿದವೇಲೆ ಕೆಲಸ ಮಾಡುತ್ತಿತ್ತು. ೧೬-೪-೧೯೭೯ ಕ್ಕೆ ಮತ್ತೆ ಕೆಟ್ಟು ಹೋಗಿದೆ. ಸಂಬಂಧಪಟ್ಟ ಕಂಪನಿಯವರಿಗೆ ರಿಪೇರಿ ಮಾಡುವುದಕ್ಕೆ ಸಾಧ್ಯವೆ ಎಂದು ಬರೆದು ಕಳುಹಿಸಿದ್ದೇವೆ. ಅವರು ರಿಪೇರಿ ಮಾಡಿಕೊಡುತ್ತೇವೆಂದು ಗ್ಯಾರಂಟಿ ಕೊಡುವುದಾದರೆ, ಮತ್ತೆ ರಿಪೇರಿ ಮಾಡಿಸುತ್ತೇವೆ. ಇಲ್ಲದಿದ್ದರೆ ಹೊಸ ಯಂತ್ರ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

Delay in sanctioning N. R. W. Schemes at Kambikeri Hosakote and Hulugavalu villages of Harapanahalli Taluk.

68. SRI D. NARAYANA DAS (Harapanahalli).—Will the Minister for Rural Development and Panchayati Raj be pleased to state :—

(a) the date on which the money was credited by the villagers of Kambikeri, Hosakote and Hulugavalu in Harapanahalli Taluk :

(b) the reasons for not according sanction to the said water supply schemes under the National Rural Water Supply Schemes so far ;

(c) when the water would be supplied to the said villages under the National Rural Water Supply Scheme?

SRI K. PRABHAKAR (Minister for Rural Development and Panchayati Raj) :

(a)—

(1) *Kambikeri Water Supply Scheme*

Date of credit	*Total amount*
21-1-76	12,000
18-6-76	500
	12,500

(2) *Hosakote Water Supply Scheme*

Date of credit		*Total amount*
20-8-75	...	3,200

(3) *Hulugavalu Water Supply Scheme*

Date of credit		*Total amount*
30-3-73	...	12,900
14-5-74	...	1,100
		14,000

(b)—

(1) Kambikeri Water Supply Scheme

It has not been possible to sanction National Rural Water Supply Scheme to this village as electricity has not been provided to this villege so far.

(2) Hosakote Water Supply Scheme.

Electricity has not been provided to this village also. Hence, it has not been possible to accord sanction to the National Rural Water Supply Scheme.

(3) Hulugavalu Water Supply Scheme.

It is not possible to accord sanction to the National Rural Water Supply Scheme to this village as the concerned panchayati has not fully contributed 10 per cent of the amount for the water supply scheme for this village.

(c) Water supply scheme will be sanctioned after the electricity is provided to the Kambikeri and Hosakote villages. The question of sanctioning National Rural Water Supply Scheme to Hulugavalu village will be considered after the concerned panchayati subscribes its 10 per cent contribution in full.

ಶ್ರೀ ಡಿ. ನಾರಾಯಣದಾಸ್.—ಸ್ವಾಮಿ, ಹುಲ್ಲುಗಾವಲು ಗ್ರಾಮದಲ್ಲಿ ಹತ್ತು ಪರ್‌ಸೆಂಟ್ ಹಣವನ್ನು ಕಟ್ಟಿಲ್ಲ ಎಂದು ಹೇಳಿದ್ದೀರಿ. ಈಗ ಫೆಬ್ರುವರಿ ತಿಂಗಳಿನಲ್ಲಿ ಮೂರೂವರೆ ಸಾವಿರ ರೂಪಾಯಿ ಕಟ್ಟಿದ್ದಾರೆ. ಒಟ್ಟು ೧೭,೫೦೦ ರೂಪಾಯಿ ಹಣ ಕಟ್ಟಿದ್ದಾರೆ. ಆದುದರಿಂದ ರಾಷ್ಟ್ರೀಯ ಗ್ರಾಮೀಣ ನೀರು ಪೂರೈಕೆ ಯೋಜನೆಯನ್ನು ತೆಗೆದುಕೊಳ್ಳುತ್ತೀರಾ?

† ಶ್ರೀ ಕೆ. ಪ್ರಭಾಕರ್.—ಇನ್ನೂ ಕಟ್ಟಬೇಕಾದಂತಹ ದುಡ್ಡು ಸ್ವಲ್ಪ ಬಾಕಿ ಇದೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಎಸ್ಟಿಮೇಟ್ ರಿವೈಸ್ಡ್ ಆಗಿದೆ, ಬ್ಯಾಲೆನ್ಸ್ ಹಣ ಕಟ್ಟಬೇಕು ಅನ್ನುವುದರ ಮೇಲೆ ತಡವಾಗಿದೆ.

ಶ್ರೀ ಡಿ. ನಾರಾಯಣದಾಸ್.—ಎಷ್ಟು ಬಾಕಿ ಇದೆ ಎನ್ನುವುದನ್ನು ತಿಳಿಸುತ್ತೀರಾ?

ಶ್ರೀ ಕೆ. ಪ್ರಭಾಕರ್.—೩,೫೦೦ ರೂಪಾಯಿಗಳು.

ಶ್ರೀ ಡಿ. ನಾರಾಯಣದಾಸ್.—೩,೫೦೦ ರೂಪಾಯಿಗಳನ್ನು ಫೆಬ್ರುವರಿ ತಿಂಗಳಿನಲ್ಲಿ ಕಟ್ಟಿದ್ದಾರೆ. ಒಟ್ಟು ೧೭,೫೦೦ ರೂಪಾಯಿ ಪೂರ್ತಿ ಕಟ್ಟಿದ್ದಾರೆ.

ಶ್ರೀ ಕೆ. ಪ್ರಭಾಕರ್.—ಅದರ ಬಗ್ಗೆ ನಾನು ಪರೀಕ್ಷೆ ಮಾಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ೩,೫೦೦ ರೂಪಾಯಿ ಹಣವನ್ನು ಪಂಚಾಯಿತಿಯವರು ಕಟ್ಟಿದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆದರೂ ಅದರ ಬಗ್ಗೆ ಪರೀಕ್ಷೆ ಮಾಡುತ್ತೇನೆಂದು ಮಾನ್ಯ ಮಂತ್ರಿಗಳು ಹೇಳಿದರೆ ಹೇಗೆ?

ಶ್ರೀ ಕೆ. ಪ್ರಭಾಕರ್.—ಈಗ ನಮ್ಮ ಲೆಕ್ಕದಲ್ಲಿ ಕಟ್ಟಿಲ್ಲ ಎಂದು ಇದೆ. ಮಾನ್ಯ ಸದಸ್ಯರು ಕಟ್ಟಿದ್ದಾರೆ ಎಂದು ಹೇಳುತ್ತಿದ್ದಾರೆ. ಆದೂ ಫೆಬ್ರುವರಿ ತಿಂಗಳಿನಲ್ಲಿ ಎಂದು ಹೇಳುತ್ತಿದ್ದಾರೆ. ಈ ಪ್ರೊಸೆಸಿಂಗ್‌ನಲ್ಲಿ ಇನ್ನೂ ನಮ್ಮ ಲೆಕ್ಕದಲ್ಲಿ ಬಂದಿಲ್ಲ. ಆದ್ದರಿಂದ ಅದರ ಬಗ್ಗೆ ಪರೀಕ್ಷೆ ಮಾಡುತ್ತೇನೆ ಎಂದು ಹೇಳಿದ್ದು.

Filling up the Vacancies of Doctors in Primary Health Centres in Sagar Taluk.

351 SRI L.T. THIMMAPPA HEGDE (Sagar)—Will the Minister for Health and Family Welfare be pleased to state:—

(a) the number of vacant posts of Doctors in the Primary Health Centres and other Hospitals in Sagar Taluk (the details of Health Centres and its names may be furnished);

(b) whether it has come to the notice of Government that the people of the Rural areas have been put to hardship due to the non-posting of Doctors for so many months;

(c) the period within which the Doctors will be appointed and when ?

SRI M. MALLAPPA (Minister for Health and Family Welfare).—

(a) One post each (total two) in Kagodu and Thumari Primary Health Centres in Sagar Taluk are vacant.

(b) Yes.

(c) The vacant posts will be filled up after selection of Doctors by the Public Service Commission, or at the time of recruiting the Doctors temporarily.

ಶ್ರೀ ಎಲ್.ಟಿ. ತಿಮ್ಮಪ್ಪ ಹೆಗಡೆ.—ಸ್ವಾಮಿ, ೩೫೧ನೇ ಪ್ರಶ್ನೆಯನ್ನು ಕೇಳುತ್ತೇನೆ.

† ಶ್ರೀ ಎಂ. ಮಲ್ಲಪ್ಪ.—ಅಧ್ಯಕ್ಷರೆ, ಮೊದಲನೇ ಉತ್ತರದಲ್ಲಿ ಕಾಗೋಡು ಮತ್ತು ತುಮರಿ ಎಂದು ಇದೆ. ಈಗ ಕಾಗೋಡಲ್ಲಿ ಡಾಕ್ಟರು ಕೆಲಸ ಮಾಡುತ್ತಿದ್ದಾರೆ.

ಶ್ರೀ ಎಲ್.ಟಿ. ತಿಮ್ಮಪ್ಪ ಹೆಗಡೆ.—ಮೊದಲು ಕಾಗೋಡಲ್ಲಿ ಇರಲಿಲ್ಲ, ಈಗ ಬಂದಿದ್ದಾರೆ. ಈಗ ಒಂದು ಕಷ್ಟ ಏನು ಅಂದರೆ ಒಂದು ಕಡೆ ಬರುತ್ತಾರೆ, ಇನ್ನೊಂದು ಕಡೆ ಹೋಗುತ್ತಾರೆ. ಇವೊತ್ತು ಆರಳಗೋಡಿನಲ್ಲಿ ಇಲ್ಲ, ಸಾಗರ್‌ನಲ್ಲಿ ಇನ್ನೊಂದು ಕಡೆ ಇಲ್ಲ. ಇವೊತ್ತು ಡಾಕ್ಟರುಗಳು ಇಲ್ಲದೇ ಇರತಕ್ಕ ಆಸ್ಪತ್ರೆಗಳು ನನ್ನ ತಾಲ್ಲೂಕಿನಲ್ಲಿ ಇವೆ. ಅವೆಲ್ಲವನ್ನೂ ಎಷ್ಟು ಕಾಲದಲ್ಲಿ ಭರ್ತಿ ಮಾಡುತ್ತೀರಾ ಎನ್ನುವ ಬಗ್ಗೆ ಮಾನ್ಯ ಸಚಿವರು ಆಶ್ವಾಸನೆ ಕೊಡಬೇಕು.

ಶ್ರೀ ಎಂ. ಮಲ್ಲಪ್ಪ:—ಈಗ ಪಬ್ಲಿಕ್ ಸರ್ವೀಸ್ ಕಮಿಷನ್ನಿಂದ ೩೫೦ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಡಾಕ್ಟರುಗಳನ್ನು ಒದಗಿಸುತ್ತಿದ್ದಾರೆ. ಈಗ ಸದ್ಯಕ್ಕೆ ನೆನ್ನೆಯ ದಿವಸ ೮೦ ಜನ ಸ್ಥಳೀಯ ಅಭ್ಯರ್ಥಿಗಳನ್ನು ನೇಮಕ ಮಾಡಿದ್ದೇವೆ. ಆದ್ದರಿಂದ ಆದಷ್ಟು ಬೇಗ ಮಾಡುತ್ತೇವೆ. ಇವೊತ್ತು